# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 137
2. ಮಾನ್ಯ ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 05.12.2023
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಹಲವಾರು ಸಕ್ಕರೆ ಕಾರ್ಖಾನೆಗಳು ತೂಕದಲ್ಲಿ ಮೋಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಬಗ್ಗೆ ಕೆಲವು ದೂರು ಬಂದಿರುತ್ತವೆ. |
| (ಆ) | ಬಂದಿದ್ದಲ್ಲಿ, ಸರ್ಕಾರದ ವತಿಯಿಂದ ತೂಕದ ಯಂತ್ರಗಳನ್ನು ಅಳವಡಿಸುವುದಕ್ಕಾಗಿ ಯೋಜಿಸಲಾಗಿದೆಯೇ; ಎಷ್ಟು ಕಾರ್ಖಾನೆಗಳಿಗೆ ಸರ್ಕಾರದ ವತಿಯಿಂದ ತೂಕದ ಯಂತ್ರಗಳನ್ನು ಅಳವಡಿಸಲಾಗಿದೆ? (ಸಂಪೂರ್ಣ ವಿವರ ನೀಡುವುದು) | ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಸರ್ಕಾರದ ವತಿಯಿಂದ ತೂಕದ ಯಂತ್ರಗಳನ್ನು ಅಳವಡಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಪ್ರಸ್ತುತ ಇರುವುದಿಲ್ಲ.<br><br>ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬಿನ ತೂಕದಲ್ಲಿ ಮೋಸ ಮಾಡುವ ಕಾರ್ಖಾನೆಗಳ ಬಗ್ಗೆ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯಕ್ಕೆ ದೂರು ನೀಡುವಂತೆ / ದೂರವಾಣಿ ಮುಖಾಂತರ ಸಂಪರ್ಕಿಸುವಂತೆ ದಿನಾಂಕ: 24.08.2023 ರಂದು "ಪ್ರಜಾವಾಣಿ" ಕನ್ನಡ ದಿನಪತ್ರಿಕೆಯಲ್ಲಿ ರಾಜ್ಯವ್ಯಾಪ್ತಿ ಪ್ರಕಟಣೆಯನ್ನು ನೀಡಲಾಗಿರುತ್ತದೆ.<br><br>ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನ ಶಾಸ್ತ್ರ ಸಚಿವರ ಸಮ್ಮುಖದಲ್ಲಿ ದಿನಾಂಕ:19.10.2023ರಂದು ಜರುಗಿದ ಸಭೆಯಲ್ಲಿ, ಮಹಾರಾಷ್ಟ್ರ ರಾಜ್ಯದ ಮಾದರಿಯಲ್ಲಿ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬಿನ ತೂಕದ ಯಂತ್ರಗಳನ್ನು ಡಿಜಿಟಲೈಜೆಷನ್ ಗೊಳಿಸುವ ಕುರಿತು ಮಾರ್ಗಸೂಚಿಗಳನ್ನು ರೂಪಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖೆ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗಳು ಪರಸ್ಪರ ಸಮಾಲೋಚನೆಯನ್ನು ನಡೆಸಿ ಸಕ್ಕರೆ ಕಾರ್ಖಾನೆಗಳಲ್ಲಿ ಉಪಯೋಗಿಸುವ ವಾಹನ ತೂಕದ ಸಾಧನಗಳಲ್ಲಿ ರೈತರಿಗೆ ಕಬ್ಬಿನ ತೂಕದಲ್ಲಿ ಆಗುತ್ತಿರುವ ಮೋಸವನ್ನು ತಡೆಗಟ್ಟಲು ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ಅನುಸರಿಸಬೇಕಾದ ಮಾದರಿ ಕಾರ್ಯಸೂಚಿ ವಿಧಾನಗಳ ಕುರಿತು ಸರ್ಕಾರದ ಆದೇಶ ಸಂಖ್ಯೆ: ಆನಾಸ 126 ಕಾಮಾಸೇ 2023, ದಿನಾಂಕ:27.11.2023ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ. ಆದೇಶದ ಪ್ರತಿಯನ್ನು **ಅನುಬಂಧ** ದಲ್ಲಿ ಒದಗಿಸಿದೆ.<br><br>ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಮೂಲಕ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿನ ಕಬ್ಬಿನ ತೂಕ ಮತ್ತು ಸಕ್ಕರೆ ಇಳುವರಿಯನ್ನು ಪರಿಶೀಲಿಸಲು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲು ಹಾಗೂ ಈ ಸಮಿತಿಯು ಕಬ್ಬು ನುರಿಸುವ ಹಂಗಾಮಿನಲ್ಲಿ ತಿಂಗಳಲ್ಲಿ ಕನಿಷ್ಠ ಎರಡು ಬಾರಿ ಯಂತ್ರಗಳ ನಿಖರತೆಯನ್ನು ಮತ್ತು ಇಳುವರಿಯನ್ನು ಪರಿಶೀಲಿಸಿ, ವರದಿ ಸಲ್ಲಿಸಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತದೆ. |

**ಸಂಖ್ಯೆ:** ಸಿಐ 328 ಸಿಒಎಫ್ 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಕ್ಕರೆ ಕಾರ್ಖಾನೆಗಳಲ್ಲಿ ಉಪಯೋಗಿಸುವ ವಾಹನ ತೂಕದ ಸಾಧನಗಳಲ್ಲಿ ರೈತರಿಗೆ ಆಗುವ ತೂಕದಲ್ಲಿ ಆಗುತ್ತಿರುವ ಮೋಸವನ್ನು ತಡೆಗಟ್ಟಲು (Weigh Bridges) ಇಲಾಖೆಯಿಂದ ಅನುಸರಿಸಬೇಕಾದ ಮಾದರಿ ಕಾರ್ಯಸೂಚಿ ವಿಧಾನಗಳು-SOP's ನೀಡುವ ಬಗ್ಗೆ.

**ಓದಲಾಗಿದೆ:** 1. ನಿಯಂತ್ರಕರು, ಕಾನೂನು ಮಾಪನಶಾಸ್ತ್ರ, ಇಲಾಖೆ ಇವರ ಏಕ ಕಡತ ಸಂಖ್ಯೆ:DLM-VDM0CONS/2/2023-VEHAPPL

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿನ ಪ್ರಸ್ತಾವನೆಯಲ್ಲಿ ಇತ್ತೀಚೆಗೆ ಸಕ್ಕರೆ ಕಾರ್ಖಾನೆಗಳಲ್ಲಿ ಉಪಯೋಗಿಸುತ್ತಿರುವ ತೂಕದ ಸಾಧನಗಳಲ್ಲಿ (Weigh Bridge) ವ್ಯವಹರಿಸುವಾಗ ರೈತರು ಬೆಳೆದ ಕಬ್ಬಿನ ತೂಕದಲ್ಲಿ ವಂಚಿಸುತ್ತಿರುವುದಾಗಿ ಇಲಾಖೆಗೆ ದೂರುಗಳು ಬರುತ್ತಿರುವ ಹಿನ್ನಲೆಯಲ್ಲಿ ಮಾನ್ಯ ಸಚಿವರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನಶಾಸ್ತ್ರ, ಇಲಾಖೆ ಹಾಗೂ ಜವಳಿ,ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಮೇಲ್ಕಂಡ ಗಂಭೀರ ಸಮಸ್ಯೆಯ ಬಗ್ಗೆ ಚರ್ಚಿಸಿದಂತೆ, ರೈತರಿಗೆ ಆಗುವ ವಂಚನೆಯನ್ನು ತಡೆಗಟ್ಟುವ ಸಲುವಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯೊಂದಿಗೆ ಸಮಾಲೋಚಿಸಿ ಕೆಲವೊಂದು ಸಲಹೆಯನ್ನು ಪಡೆದು, ಈ ಬಗ್ಗೆ ಕಾನೂನು ಮಾಪನಶಾಸ್ತ್ರ, ಇಲಾಖೆಯಿಂದ ಸತ್ಯಾಪನೆ ಮತ್ತು ಮುದ್ರೆ ಹಾಗೂ ತಪಾಸಣೆ ಕೈಗೊಳ್ಳಲು ಕೆಲವು ಮಾದರಿ ಕಾರ್ಯ ವಿಧಾನ (SOP's)ಗಳನ್ನು ಸಿದ್ಧಪಡಿಸಿ, ಆದೇಶಿಸುವಂತೆ ಪ್ರಸ್ತಾವನೆಯಲ್ಲಿ ನಿಯಂತ್ರಕರು, ಕಾನೂನು ಮಾಪನಶಾಸ್ತ್ರ, ಇಲಾಖೆ ಇವರು, ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿದ ಸರ್ಕಾರವು ಸಕ್ಕರೆ ಕಾರ್ಖಾನೆಗಳಲ್ಲಿ ಉಪಯೋಗಿಸುವ ತೂಕದ ಸಾಧನಗಳಲ್ಲಿ ರೈತರಿಗೆ ತೂಕದಲ್ಲಿ ಆಗುತ್ತಿರುವ ಮೋಸವನ್ನು ತಡೆಗಟ್ಟಲು ಇಲಾಖೆಯಿಂದ ಅನುಸರಿಸಬೇಕಾದ ಕೆಲವು ಮಾದರಿ ಕಾರ್ಯಸೂಚಿ ವಿಧಿ ವಿಧಾನಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆನಾಸ 126 ಕಾಮಾಸೇ 2023**
**ಬೆಂಗಳೂರು, ದಿನಾಂಕ:27.11.2023**

ಸಕ್ಕರೆ ಕಾರ್ಖಾನೆಗಳಲ್ಲಿ ಕಾನೂನು ಮಾಪನ ಶಾಸ್ತ್ರ, ಇಲಾಖೆ (Legal Metrology Department) ಯಿಂದ ಸತ್ಯಾಪನೆ ಮತ್ತು ಮುದ್ರೆ ಮಾಡಿಸಿಕೊಂಡು ಉಪಯೋಗಿಸುವ ತೂಕದ ಸಾಧನಗಳಲ್ಲಿ ರೈತರಿಗೆ ಆಗುತ್ತಿರುವ ಮೋಸವನ್ನು ತಡೆಗಟ್ಟಲು ಇಲಾಖೆಯಿಂದ ಅನುಸರಿಸಬೇಕಾದ ಈ ಕೆಳಕಂಡ ಮಾದರಿ ಕಾರ್ಯಸೂಚಿ ವಿಧಿ ವಿಧಾನಗಳನ್ನು ತಕ್ಷಣದಿಂದಲೇ ಅನುಷ್ಠಾನಗೊಳಿಸಲು ಆದೇಶಿಸಿದೆ.

1. ವಾಹನ ತೂಕದ ಸಾಧನಗಳು ಕಡ್ಡಾಯವಾಗಿ In- Built Printing Facility, ಹೊಂದಿರತಕ್ಕದ್ದು, ಕಬ್ಬಿನ (Sugar Cane) ತೂಕದ ರಶೀದಿಯನ್ನು ಕಬ್ಬು ತೂಕ ಮಾಡಿದ ತಕ್ಷಣ ಇಂಡಿಕೇಟರ್‌ಗೆ ಜೋಡಿಸಿದ ಪ್ರಿಂಟರ್‌ನಿಂದ ಮುದ್ರಿಸಿ ನೀಡತಕ್ಕದ್ದು. ಈ ರಶೀದಿಯು ತೂಕ ಮಾಡಲಾದ ದಿನಾಂಕ, ಸಂಬಂಧಿತ ವಾಹನ ಸಂಖ್ಯೆ, ತೂಕದ ವಿವರ, ಖಾಲಿ ವಾಹನ ತೂಕದ ವಿವರ, ಕಬ್ಬು ತುಂಬಿದ ಮೇಲೆ ವಾಹನ ತೂಕದ ವಿವರ, ಹಾಗೂ ಕಬ್ಬಿನ ನಿವ್ವಳ ತೂಕದ ವಿವರ ಇತ್ಯಾದಿ ಮಾಹಿತಿಯನ್ನು ಒಳಗೊಂಡಿರತಕ್ಕದ್ದು.

2. ಲೋಡ್‌ಸೆಲ್‌ನಿಂದ ಪ್ರಾರಂಭಿಸಿ ಜಂಕ್ಷನ್ ಬಾಕ್ಸ್ ಮೂಲಕ, ಇಂಡಿಕೇಟರ್‌ಗೆ ತಲುಪುವ ಕೇಬಲ್‌ನಲ್ಲಿ ಯಾವುದೇ ಕಟ್‌ಜಾಯಿಂಟ್ ಇರತಕ್ಕದ್ದಲ್ಲ ಅಥವಾ ನಡುವೆ ಯಾವುದೇ ಹೊಸಜೋಡಣೆಗಳು ಇರತಕ್ಕದ್ದಲ್ಲ. ಈ ಕೇಬಲ್‌ಗಳು ಕನ್ಸೀಲ್ಡ್ (Concealed) ಆಗಿರತಕ್ಕದ್ದಲ್ಲ. ಈ ಕೇಬಲ್‌ಗಳು ಸಂಪೂರ್ಣವಾಗಿ ಸ್ಪಷ್ಟವಾಗಿ ಕಾಣಿಸುವಂತಿರತಕ್ಕದ್ದು.

3. ಲೋಡ್‌ಸೆಲ್‌ನಿಂದ ಇಂಡಿಕೇಟರ್‌ವರೆಗೆ ಯಾವುದೇ ಗುಪ್ತಸಾಧನಗಳನ್ನು (hidden device) ಅಳವಡಿಸತಕ್ಕದ್ದಲ್ಲ. ಹಾಗೂ ಇಲಾಖಾ ಅಧಿಕಾರಿಗಳು ಈ ರೀತಿ ಯಾವುದೇ ಗುಪ್ತ ಸಾಧನಗಳನ್ನು ಅಲವಡಿಸಿಕೊಂಡಿದ್ದು, ಕಂಡುಬಂದಲ್ಲಿ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಸೂಕ್ತ ಕಾನೂನು ಕ್ರಮ ಜರುಗಿಸತಕ್ಕದ್ದು.

4. ತೂಕದ ಸಾಧನದ ಡಿಜಿಟಲ್ ಇಂಡಿಕೇಟರ್‌ನಲ್ಲಿ DISCRIPTIVE MARKING PLATE ಕಡ್ಡಾಯವಾಗಿ ಅಳವಡಿಕೆಯಾಗಿದ್ದು, ದುರುಪಯೋಗವನ್ನು ತಡೆಯಲು ನಿಯಮಾನುಸಾರ ಮತ್ತು ಕ್ರಮಬದ್ಧವಾಗಿ ಕಾನೂನು ಮಾಪನ ಶಾಸ್ತ್ರ, ಇಲಾಖೆಯಿಂದ ಸೀಲು ಮಾಡಿ ಭದ್ರಪಡಿಸಲು ಕ್ರಮವಹಿಸತಕ್ಕದ್ದು.

5. ಕಾನೂನು ಮಾಪನ ಶಾಸ್ತ್ರ, ಇಲಾಖಾಧಿಕಾರಿಗಳು / ಸಿಬ್ಬಂಧಿಗಳು ತೂಕದ ಸಾಧನಗಳಲ್ಲಿ ಬಳಸುತ್ತಿರುವ Analog ಲೋಡ್‌ಸೆಲ್‌ನಿಂದ ಡಿಜಿಟಲ್ ಲೋಡ್‌ಸೆಲ್‌ಗೆ ಅಳವಡಿಕೆಯಾಗಿರುವುದನ್ನು ಗಮನಿಸುವುದು ಹಾಗೂ ಪರಿಶೀಲಿಸತಕ್ಕದ್ದು. ತೂಕದ ಸಾಧನಗಳಲ್ಲಿ ಯಾವುದೇ Analog Loadcell ನಲ್ಲಿ ಬಳಕೆಯಾಗಿದ್ದಲ್ಲಿ ಅಂತಹವರ ವಿರುದ್ಧ ಸೂಕ್ತ ಕ್ರಮವಹಿಸತಕ್ಕದ್ದು. ಹಾಗೂ ತತ್ಸಂಬಂಧಿತ ನಿಯಮಾವಳಿಗಳನ್ನು ಪಾಲಿಸತಕ್ಕದ್ದು.

6. ತೂಕದ ಸಾಧನದಲ್ಲಿ ಮಾಡೆಲ್ ಅಪ್ರೂವಲ್ ಪ್ರಮಾಣ ಪತ್ರದಲ್ಲಿ ನಿಗಧಿಪಡಿಸಲಾದ SOFTWARE VERSION ದೊಡ್ಡದಾಗಿ ಕಾಣಿಸುವಂತೆ ಹಾಕಿರತಕ್ಕದ್ದು. ಪ್ರಾಧಿಕಾರದ ವಿವರ ಹಾಗೂ ಪ್ರಮಾಣಪತ್ರದ ಕಾಲಾವಧಿ, ಹೆಸರು, ದೂರವಾಣಿ ಸಂಖ್ಯೆ ಇರತಕ್ಕದ್ದು ಹಾಗೂ ಕಾಣುವಂತಿರತಕ್ಕದ್ದು.

7. ಈ ತಾಂತ್ರಿಕತೆಯ ಮಾನದಂಡ ಅಳವಡಿಕೆ ಹಾಗೂ ನಿರ್ವಹಣೆಯನ್ನು ಕಡ್ಡಾಯವಾಗಿ ಸಕ್ಕರೆ ಕಾರ್ಖಾನೆ ಮಾಲೀಕರು / ತೂಕದ ಸಾಧನ ತಯಾರಕರು / ಮಾರಾಟಗಾರರು / ದುರಸ್ತಿದಾರರು ಪಾಲಿಸತಕ್ಕದ್ದು.

8. ಇಂಡೀಕೇಟರ್‌ಗಳನ್ನು ಬದಲಾಯಿಸುವುದನ್ನು ತಡೆಗಟ್ಟಲು ಲೋಡ್‌ಸೆಲ್‌ನ ಕೇಬಲ್ ನೇರವಾಗಿ ಇಂಡಿಕೇಟರ್‌ನ ಪಿಸಿಬಿ ಗೆ ಅಳವಡಿಕೆಯಾಗುವಂತೆ ಕ್ರಮವಹಿಸತಕ್ಕದ್ದು.

ಈ ಎಲ್ಲಾ ಆದೇಶಿತ ಮಾರ್ಗಸೂಚಿಗಳ ಪಾಲನೆ/ ಸರಿಯಾದ ಕ್ರಮದಲ್ಲಿ, ಅನುಷ್ಠಾನಗೊಂಡಿದೆಯೇ ಎಂಬ ಬಗ್ಗೆ ಇಲಾಯ ಆಯಾ ವಿಭಾಗದ/ ಸ್ಥಾನಿಕ ಅಧಿಕಾರಿಗಳು ಪರಿಶೀಲಿಸಿ ಎರಡನೇ ಮತ್ತು ನಾಲ್ಕನೇ ಶುಕ್ರವಾರದಂದು ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ, ಇಲಾಖೆ ಇವರಿಗೆ ವರದಿ ಒಪ್ಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

27-11-2023

(ಸದಾನಂದ)
ಸರ್ಕಾರದ ಅಧೀನ ಕಾರ್ಯದರ್ಶಿ(ಸಮನ್ವಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ, ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಆಹಾರ, ನಾಗರಿಕ ಸರಬರಾಜು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ, ಇಲಾಖೆಗೆ ಒದಗಿಸುವಂತೆ ಕೋರಿದೆ.

**ಇವರಿಗೆ:**

1: ಮಹಾಲೇಖಪಾಲರು, (ಎ & ಇ), ಕರ್ನಾಟಕ ರಾಜ್ಯ ಬೆಂಗಳೂರು
2. ನಿಯಂತ್ರಕರು, ಕಾನೂನು ಮಾಪನಶಾಸ್ತ್ರ, ಇಲಾಖೆ, ಆಲಿಆಸ್ಕರ್ ರಸ್ತೆ, ಬೆಂಗಳೂರು-52
3. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ,ಬೆಂಗಳೂರು.
4. ಜವಳಿ,ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-5), ವಿಧಾನಸೌಧ.
6. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ. ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ. ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ,(ಆಹಾರ-1 & 2)ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ. ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.